ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು) :

ಅ) ಬಂದಿದೆ.

ಆ) ಕೇಂದ್ರ ಸರ್ಕಾರದ ಪ್ರಾಯೋಜಿತ ತ್ವರಿತ ನಗರ ನೀರು ಸರಬರಾಜು ಯೋಜನೆಯಡಿ ರೂ. 747.00 ಲಕ್ಷ ಗಳ ಅಂದಾಜು ಮೊತ್ತದ ಯೋಜನೆಯನ್ನು ಕೈಗೆತ್ತಿಕೊಂಡಿದ್ದು ಈ ಯೋಜನೆಯನ್ನು ಚಾಲನೆಗೊಳಿಸಿದ ನಂತರ ಒಳಚರಂಡಿ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಈ) ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.

5352(6057) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) : ಮಾನ್ಯ ಮುಖ್ಯಮಂತ್ರಿಗಳು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಳ್ಳೇಗಾಲ ಮುಡಿಗುಂಡಂ ಪ್ರದೇಶದ ಸರ್ವೆ ನಂ. 601/1ಎ ರಲ್ಲಿ ಗಣಿ ಗಾರಿಕೆ ನಡೆಸಲು ಸ್ಫೋಟಕಗಳನ್ನು ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ ಸ್ಫೋಟಕ ಬಳಸಲು ಸಂಬಂಧಿಸಿದ ಪ್ರಾಧಿಕಾರದಿಂದ ಪರವಾನಿಗೆ ಪಡೆದು ಮ್ಯಾಗಜಿನ್ ಸ್ಥಾಪಿಸಲಾಗಿದೆಯೇ;

ಇ) ಹಾಗಿಲ್ಲವಾದಲ್ಲಿ ಕಾನೂನಿನ ರೀತ್ಯ ಸ್ಫೋಟಕ ಬಳಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆಯೇ;

ಈ) ನಿಷೇಧಿತ ಸ್ಫೋಟಕಗಳ ಅವ್ಯಾಹತವಾಗಿ ಬಳಕೆಯಾಗಿ ಪರಿಸರ ಹಾಳಾಗುತ್ತಿರುವುದರ ಜೊತೆಗೆ ಕಾರ್ಮಿಕರ ಪ್ರಾಣ ಹಾನಿ ಹಾಗೂ ಸಾರ್ವಜನಿಕರ ಆಸ್ತಿ ಹಾನಿಯಾಗುವುದರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇದೆಯೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಗಮನಕ್ಕೆ ಬಂದಿದೆ, ಗುತ್ತಿಗೆಗಳನ್ನು ನಾನ್ ಬ್ಲಾಸ್ಟಿಂಗ್ ಷರತ್ತಿನನ್ವಯ ನೀಡಲಾಗಿದೆ, ಬ್ಲಾಸ್ಟಿಂಗ್ ಕಾರ್ಯವನ್ನು ನಿಯಮಾವಳಿಯಂತೆ ಪರವಾನಗಿ ಪಡೆದವರಿಂದ ಒಪ್ಪಂದದ ಮೇರೆಗೆ ನಿರ್ವಹಿಸಿ ಕೊಳ್ಳುತ್ತಿದ್ದಾರೆ. ಅದಕ್ಕಾಗಿ ನೋಟೀಸ್ ಜಾರಿ ಮಾಡಿದೆ.

ಆ) ಮ್ಯಾಗ್‌ಜಿನ್ ಸ್ಥಾಪಿಸಿರುವುದಿಲ್ಲ. ಆದಾಗ್ಯೂ ಅನುಮತಿ ಹೊಂದಿದ ಸ್ಫೋಟಕದಾರ ಮ್ಯಾಗಜಿನ್‌ನಿಂದ ಪಡೆಯುತ್ತಿರುವುದಾಗಿ ತಿಳಿಸಿರುತ್ತಾರೆ.

ಇ) ಈ ವಿಷಯದಲ್ಲಿ ಗಣಿ ಇಲಾಖೆಯಿಂದ, ಗುತ್ತಿಗೆ ಷರತ್ತುಗಳನ್ನು ಉಲ್ಲಂಘಿಸಿದಕ್ಕಾಗಿ ದಿನಾಂಕ: 7-7-2005ರಂದು ನೋಟೀಸ್ ಜಾರಿ ಮಾಡಿದೆ. ಸ್ಫೋಟಕದ ಬಳಕೆಯು ನಿಯಮಾವಳಿಯನ್ವಯ ಜರುಗಿಸಲಾಗುತ್ತಿದೆಯೆ ಎಂಬುದನ್ನು ಪರಿಶೀಲಿಸಿ ಕೊಳ್ಳಲು ಮತ್ತು ನಿಯಮ ಬಾಹಿರವಾಗಿ ಸ್ಫೋಟಕ ಬಳಸುತ್ತಿರುವವರ ಮೇಲೆ ಕ್ರಮ ಕೈಗೊಳ್ಳಲು ಸ್ಫೋಟಕ ಪರವಾನಗಿ ನೀಡುವ ಇಲಾಖೆ ಬರೆಯಲಾಗಿದೆ.

ಈ) ಕಾಳಜಿ ಇದೆ. ವಿವರಗಳನ್ನು 'ಅ', 'ಆ' ಮತ್ತು 'ಇ' ರಲ್ಲಿ ನೀಡಲಾಗಿದೆ.

5353(6058) ಶ್ರೀ ಬಾಲರಾಜ್ ಎನ್ (ಕೊಳ್ಳೇಗಾಲ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೊಳ್ಳೇಗಾಲ ಕ್ಷೇತ್ರದ ಸತ್ತೇಗಾಲ ಏತ ನೀರಾವರಿ ದುರಸ್ತಿಯಾಗದೇ ಕೆಟ್ಟು ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ದುರಸ್ತಿಗೆ ಸರ್ಕಾರ ಕೈ ಗೊಂಡಿರುವ ಕ್ರಮವೇನು ಅಥವಾ ನೂತನವಾಗಿ ನವೀಕರಣ ಮಾಡುವುದರ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ?